1	2	3	4	5	6	7
24.	ಶಿವಮೊಗ್ಗ	28	560	532.50	28	500.00
25.	ತುಮಕೂರು	39	780	539.00	37	433.00
26.	ಉಡುಪಿ	38	760	513.65	36	271.00
27.	ಉತ್ತರ ಕನ್ನಡ	70	1580	1161.00	63	820.00
	ಒಟ್ಟು	**1300**	**26000**	**15213.96**	**1164**	**11004.00**

ಆಶ್ರಯ ಯೋಜನೆ ಫಲಾನುಭವಿಗಳು

1489(1569) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ನೀಡಲಾಗುವ ಒಟ್ಟು ಮೊತ್ತವೆಷ್ಟು;

ಆ. ಇದರಲ್ಲಿ ನೀಡುವ ಸಹಾಯಧನವೆಷ್ಟು;

ಇ. ಬಾಕಿ ಹಣವನ್ನು ಎಷ್ಟು ಕಂತುಗಳಲ್ಲಿ ಮರುಪಾವತಿಸಬೇಕು ಹಾಗೂ ಕಂತುಗಳ ಮೊತ್ತವೆಷ್ಟು;

ಈ. ಈ ಬಾಕಿ ಮೊಬಲಗಿನ ಮರುಪಾವತಿಗೆ ಬಡ್ಡಿ ವಿಧಿಸಲಾಗಿದೆಯೆ;

ಉ. ವಿಧಿಸಿದರೆ ಬಡ್ಡಿ ದರವೇನು?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು)

ಅ. ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಆಶ್ರಯ ಯೋಜನೆಗಳಡಿಯಲ್ಲಿ ಫಲಾನುಭವಿಗಳಿಗೆ ನೀಡುತ್ತಿರುವ ಸಾಲ ಮತ್ತು ಸಹಾಯಧನದ ವಿವರ ಈ ಕೆಳಗಿನಂತಿದೆ:

		ಆರ್ಥಿಕ ಸಹಾಯ		
ಯೋಜನೆ	ವರ್ಗ	ಸಹಾಯ ಧನ	ಸಾಲ	ಒಟ್ಟು
ನಗರ ಆಶ್ರಯ	ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ	-	25000	25000
	ಸಾಮಾನ್ಯ			
ಗ್ರಾಮೀಣ ಆಶ್ರಯ	ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ	20000	-	20000
	ಸಾಮಾನ್ಯ	10000	10000	20000

ಇ. ಸಾಲವನ್ನು ಪ್ರತಿ ರೂ. 10000/- ಗಳ ಸಾಲಕ್ಕೆ ಪ್ರತಿ ತಿಂಗಳು ರೂ. 115 ರಂತೆ 180 ಕಂತುಗಳಲ್ಲಿ ಮರುಪಾವತಿಸಬೇಕು.

ಈ. ಹೌದು.

ಉ. ವಿಧಿಸುವ ಬಡ್ಡಿದರ ಶೇಕಡ 11.